ಕರ್ನಾಟಕ ಸರ್ಕಾರ

## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ(ಇತರೆ ಪರೀಕ್ಷೆಗಳು) ಮಲ್ಲೇಶ್ವರಂ, ಬೆಂಗಳೂರು-03

**ಸಂಖ್ಯೆ:ಎಸ್1/ವಾ.ಪ/ಜುಲೈ-2022/ಅಧಿ.ಸು.ಜ್ಞಾ/06/2021-22** **ದಿನಾಂಕ:21/05/2022**

### ಜ್ಞಾಪನ

ವಿಷಯ: ಜುಲೈ-2022ರ ವಾಣಿಜ್ಯ ಪರೀಕ್ಷೆಗೆ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಭರ್ತಿ ಮಾಡುವಾಗ ಗಮನಿಸಬೇಕಾದ ಅಂಶಗಳ ಬಗ್ಗೆ.

ಉಲ್ಲೇಖ: ಈ ಕಛೇರಿ ಅಧಿಸೂಚನೆ ಸಮಸಂಖ್ಯೆ ದಿನಾಂಕ: 17/05/2022.

***

1) ಈ ಹಿಂದಿನ ಸಾಲಿನ ವಾಣಿಜ್ಯ ಪರೀಕ್ಷೆಗಳಲ್ಲಿ ಒಬ್ಬನೇ ಅಭ್ಯರ್ಥಿಯು ಬೇರೆ ಬೇರೆ ವಿಷಯಗಳಲ್ಲಿ ಅರ್ಜಿಗಳನ್ನು ಭರ್ತಿ ಮಾಡುವಾಗ ಒಂದೇ ತಂಡವನ್ನು ಆಯ್ಕೆ ಮಾಡಿದ್ದು, ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ದಿನಾಂಕದ ನಂತರ ತಂಡಗಳ ಬದಲಾವಣೆ ಕೋರಿ ಮನವಿ ಸಲ್ಲಿಸುತ್ತಿರುವುದು ಮಂಡಳಿಯ ಗಮನಕ್ಕೆ ಬಂದಿದೆ. ಇದರಿಂದ ಪರೀಕ್ಷಾ ಚಟುವಟಿಕೆಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಅರ್ಜಿ ಭರ್ತಿ ಮಾಡುವ ಸಮಯದಲ್ಲಿ ಈ ರೀತಿಯ ಪ್ರಮಾದಗಳಿಗೆ ಆಸ್ಪದವಾಗದಂತೆ ಜಾಗರೂಕತೆಯಿಂದ ಅರ್ಜಿಗಳನ್ನು ಭರ್ತಿ ಮಾಡುವುದು.

2) ಅರ್ಜಿ ಸಲ್ಲಿಸಿದ ನಂತರ ವಿಷಯ ಬದಲಾವಣೆಗೆ ಅವಕಾಶ ನೀಡಲಾಗುವುದಿಲ್ಲವೆಂದು ಅಧಿಸೂಚನೆಯಲ್ಲಿ ತಿಳಿಸಿದ್ದಾಗ್ಯೂ ವಿಷಯ ಬದಲಾವಣೆ ಮಾಡಿಕೊಡುವಂತೆ ಮನವಿ ಸಲ್ಲಿಸುತ್ತಿರುವುದು ಮಂಡಳಿಯ ಗಮನಕ್ಕೆ ಬಂದಿದೆ. ಇದರಿಂದ ಪ್ರಶ್ನೆ ಪತ್ರಿಕೆ ಬೇಡಿಕೆ ಪಟ್ಟಿ, ಉತ್ತರ ಪತ್ರಿಕೆ ಬೇಡಿಕೆ ಪಟ್ಟಿ ಸಿದ್ಧಪಡಿಸಲು ತೊಂದರೆಯಾಗಿದ್ದು, ಮಂಡಳಿಯ ಪರೀಕ್ಷಾ ಕಾರ್ಯಗಳಿಗೂ ತೊಂದರೆಯಾಗುತ್ತಿದೆ.

3) ಪರೀಕ್ಷಾ ಅರ್ಜಿ ಸಲ್ಲಿಸುವಾಗ ಫಲಿತಾಂಶ ಉತ್ತಮಪಡಿಸಿಕೊಳ್ಳಲು ಬಯಸುವ ಅಭ್ಯರ್ಥಿಗಳು ಮಂಡಳಿಯಿಂದ ಅನುಮತಿ ಪಡೆದಿರಬೇಕು ಎಂದು ತಿಳಿಸಲಾಗಿದೆ. ಪ್ರೌಢದರ್ಜೆ ವಿಷಯಕ್ಕೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಭ್ಯರ್ಥಿಗಳು ಪ್ರೌಢ ದರ್ಜೆ ವಿಷಯದ ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಮಂಡಳಿಯಿಂದ ಅನುಮತಿ ಪಡೆದಿದ್ದರೂ ಜೂನಿಯರ್ ವಿಷಯವನ್ನು ಆಯ್ಕೆ ಮಾಡಿರುವ ಉದಾಹರಣೆಗಳಿರುತ್ತವೆ. ಈ ರೀತಿ ವಿಷಯ ಬದಲಾವಣೆಗೆ ಯಾವುದೇ ಕಾರಣಕ್ಕೂ ಅವಕಾಶವಿರುವುದಿಲ್ಲವೆಂದು ತಿಳಿಸಿದೆ.

4) ಕೆಲವು ವಾಣಿಜ್ಯ ಸಂಸ್ಥೆಗಳ ಪ್ರಾಚಾರ್ಯರುಗಳು ಅರ್ಜಿ ಸಲ್ಲಿಸುವ ಸಮಯದಲ್ಲಿ ಒಬ್ಬರು ಅಭ್ಯರ್ಥಿಯ ಒಂದೇ ಅರ್ಜಿಯನ್ನು ಸಲ್ಲಿಸಿದ್ದು, ಪ್ರವೇಶ ಪತ್ರದಲ್ಲಿ ಅಭ್ಯರ್ಥಿಯ ವಿಷಯ ಬದಲಾವಣೆ ಮಾಡಿಕೊಂಡು ಎರಡೂ ವಿಷಯಗಳಿಗೂ ಪರೀಕ್ಷೆಗೆ ಹಾಜರುಪಡಿಸಿರುವುದು ಮಂಡಳಿಯ ಗಮನಕ್ಕೆ ಬಂದಿರುತ್ತದೆ. ಈ ಪ್ರಕರಣವನ್ನು ಮಂಡಳಿಯು ಗಂಭೀರವಾಗಿ ಪರಿಗಣಿಸಿದೆ. ಇದರಿಂದ ಅಭ್ಯರ್ಥಿಗಳ ಫಲಿತಾಂಶವನ್ನು ಪ್ರಕಟಿಸಲು ಸಾಧ್ಯವಾಗುವುದಿಲ್ಲ. ಇಂತಹ ಪ್ರಕರಣಗಳು ಮರುಕಳಿಸಿದಲ್ಲಿ ಮಂಡಳಿಯ ನಿಯಮಾನುಸಾರ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದೆ.

5) ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಸಂಧರ್ಭದಲ್ಲಿ ನಾನ್ ಕೆ.ಎಸ್.ಇ.ಇ.ಬಿ. ಅಭ್ಯರ್ಥಿಗಳ ಮಾಹಿತಿಯನ್ನು ಭರ್ತಿ ಮಾಡುವಾಗ ಅಭ್ಯರ್ಥಿಯ ಹೆಸರು, ತಂದೆಯ ಹೆಸರು, ತಾಯಿಯ ಹೆಸರು, ಜನ್ಮ ದಿನಾಂಕ, ಇತ್ಯಾದಿ ಮಾಹಿತಿಗಳನ್ನು ಸರಿಯಾಗಿ ಭರ್ತಿ ಮಾಡದಿರುವುದರಿಂದ ಅಂಕಪಟ್ಟಿಯಲ್ಲಿ ಅಭ್ಯರ್ಥಿಗಳ ಮಾಹಿತಿಯು ತಪ್ಪಾಗಿ ನಮೂದಾಗಿರುತ್ತದೆ. ಇದರಿಂದ ಅಭ್ಯರ್ಥಿಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಅಭ್ಯರ್ಥಿಗಳ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಭರ್ತಿ ಮಾಡುವಾಗ ಸಂಬಂಧಿಸಿದ ಅಭ್ಯರ್ಥಿಗಳ ಪೂರಕ ದಾಖಲೆಗಳನ್ನು ಪಡೆದು ಕರಾರುವಕ್ಕಾದ ಮಾಹಿತಿಯನ್ನು ಪಡೆದು ಮಾಹಿತಿಯನ್ನು ಭರ್ತಿ ಮಾಡಲು ತಿಳಿಸಿದೆ.

6) ಪರಿಶಿಷ್ಠ ಜಾತಿ/ಪಂಗಡದ ಅಭ್ಯರ್ಥಿಗಳ ಅರ್ಜಿಯಲ್ಲಿ ಜಾತಿ ಪ್ರಮಾಣ ಪತ್ರದ ಆರ್.ಡಿ ಸಂಖ್ಯೆಯನ್ನು ನಮೂದಿಸದ ಕಾರಣ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ನಿಗಧಿಪಡಿಸಿದ ಪರಿಕ್ಷಾ ಶುಲ್ಕದ ಚಲನ್ ಜನರೇಟ್ ಆಗುತ್ತದೆ. ಚಲನ್‌ನಲ್ಲಿರುವ ಮೊತ್ತವನ್ನು ಪಾವತಿಸಿ ನಂತರ ಪರೀಕ್ಷಾ ಶುಲ್ಕವನ್ನು Refund ಮಾಡುವಂತೆ ಪ್ರಸ್ತಾವನೆ ಸಲ್ಲಿಸುತ್ತಿರುವುದು ಕಂಡುಬಂದಿದೆ. ಇದು ಸಂಸ್ಥೆಗಳ ಮುಖ್ಯಸ್ಥರ ನಿರ್ಲಕ್ಷ್ಯದಿಂದ ಉಂಟಾಗುವ ಲೋಪವಾಗುವುದರಿಂದ ಇಂತಹ Refund ಪ್ರಸ್ತಾವನೆಗಳನ್ನು ಮಂಡಳಿಯು ಮಾನ್ಯ ಮಾಡುವುದಿಲ್ಲ.

ಜುಲೈ–2022ರಲ್ಲಿ ನಡೆಯುವ ವಾಣಿಜ್ಯ ಪರೀಕ್ಷೆಗೆ ಸಂಸ್ಥೆಯ ಮುಖ್ಯಸ್ಥರು ತಮ್ಮ ಶಾಲಾ ಅಭ್ಯರ್ಥಿಗಳ ಅರ್ಜಿಗಳನ್ನು ಒಮ್ಮೆ ಸಲ್ಲಿಸಿದ ನಂತರ ಯಾವುದೇ ವಿಷಯ, ತಂಡ, ಮಾಧ್ಯಮ, ಪರೀಕ್ಷಾ ಕೇಂದ್ರ, ಇತ್ಯಾದಿ ಯಾವುದೇ ಬದಲಾವಣೆಗಳಿಗೆ ಅವಕಾಶವಿರುವುದಿಲ್ಲ. ಈ ಸಂಬಂಧ ಸಂಸ್ಥೆಗಳಿಂದ ಬರುವ ಯಾವುದೇ ಪ್ರಸ್ತಾವನೆಗಳನ್ನು ಮಂಡಳಿಯಿಂದ ಮಾನ್ಯ ಮಾಡುವುದಿಲ್ಲ. ಒಂದು ವೇಳೆ ಅರ್ಜಿಯಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬಂದಲ್ಲಿ ಸಂಸ್ಥೆಯ ಪ್ರಾಚಾರ್ಯರೇ ಹೊಣೆಗಾರರಾಗಿರುತ್ತೀರಿ ಎಂದು ತಿಳಿಸಿದೆ.

ನಿರ್ದೇಶಕರು,
(ಇತರೆ ಪರೀಕ್ಷೆಗಳು)

**ಪ್ರತಿಯನ್ನು:**

ರಾಜ್ಯದ ಎಲ್ಲಾ ವಾಣಿಜ್ಯ ಸಂಸ್ಥೆಗಳ ಮುಖ್ಯಸ್ಥರುಗಳಿಗೆ ಸೂಕ್ತ ಕ್ರಮಕ್ಕಾಗಿ,